**ದಿನಾಂಕಃ 19.12.2025 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

ಪಾಟೀ ಸವಾಲುಃ **3**ನೇ ಎದುದಾರರ ಪರ ಮಾನ್ಯ ವಕೀಲರಿಂದ.

ನಾನು ರೈಲ್ವೆ ಇಲಾಖೆಯಲ್ಲಿ ಕೆಲಸ ಮಾಡುತ್ತಿದ್ದೇನೆ. ಅಪಘಾತ ಪೀಣ್ಯ ಫ್ಲೈ ಓವರ್ ನಲ್ಲಿ ರಾತ್ರಿ 8.30 ಗಂಟೆಯ ಸಮಯದಲ್ಲಿ ಸಂಭವಿಸಿರುತ್ತದೆ. ಆ ಸಮಯದಲ್ಲಿ ವಾಹನ ಸಂಚಾರ ಹೆಚ್ಚಾಗಿ ಇರುತ್ತದೆ ಎಂದರೆ ಸರಿ. ಅಪಘಾತ ಸರಣಿ ಅಪಘಾತ ಆಗಿದ್ದು, ಸಾಕಷ್ಟು ವಾಹನಗಳು ಭಾಗಿಯಾದ್ದವು ಎಂದರೆ ಸರಿ. ಮುಂದೆ ಹೋಗುತ್ತಿದ್ದ ವಾಹನ ಇದ್ದಕ್ಕಿದ್ದಂತೆ ಬ್ರೆಕ್ ಹಾಕಿದ ಕಾರಣ ಅಪಘಾತ ಸಂಭವಿಸಿರುತ್ತದೆ ಎಂದರೆ ಸರಿ. ಅಪಘಾತದಲ್ಲಿ ಭಾಗಿಯಾದ ಎಲ್ಲಾ ವಾಹನಗಳಿಗೆ ಸಣ್ಣಪುಟ್ಟ ಜಖಂ ಗಳು ಆಗಿವೆ ಎಂದರೆ ಸರಿ. ಅದೇ ರೀತಿ ನನ್ನ ವಾಹನಕ್ಕೂ ಕೂಡ ಸಣ್ಣಪುಟ್ಟ ಹಾನಿಯಾಗಿರುತ್ತದೆ ಎಂದರೆ ಸರಿ. ಆಪಾದಿತ ವಾಹನದ ಮಾಲೀಕರು ವಾಹನವನ್ನು ರಿಪೇರಿ ಮಾಡಿಸಿಕೊಡುವುದಾಗಿ ತಿಳಿಸಿದ ಕಾರಣ ದೂರನ್ನು 3 ದಿನ ತಡವಾಗಿ ನೀಡಿರುತ್ತೇನೆ. ಅಪಘಾತದಲ್ಲಿ ನನಗೆ ಸಣ್ಣಪುಟ್ಟ ಗಾಯಗಳು ಆಗಿದ್ದವು. ನಾನು ಆಸ್ಪತ್ರೆಗೆ ಚಿಕಿತ್ಸೆಗೆ ಹೋಗಿಲ್ಲ, ಆದರೆ ಕ್ಲಿನಿಕ್ ನಲ್ಲಿ ಔಷಧಿ ಪಡೆದಿರುತ್ತೇನೆ. ಅಪಘಾತದಲ್ಲಿ ಸಾಕಷ್ಟು ವಾಹನಗಳು ಭಾಗಿಯಾಗಿರುವುದರಿಂದ ಎಲ್ಲಾ ವಾಹನಗಳ ತಪ್ಪು ಇದೆ ಎಂದರೆ ಸರಿ. ಬೊಲೆರೊ ವಾಹನದ ಚಾಲಕನೊಂದಿಗೆ ನಾನು ಜಗಳ ಮಾಡಿರುತ್ತೇನೆ ಎಂದರೆ ಸರಿಯಲ್ಲ. ಎಲ್ಲಾ ವಾಹನಗಳ ತಪ್ಪಿ ನಿಂದ ಅಪಘಾತವಾಗಿದ್ದರೂ ಸಹ ಕೇವಲ ಆಪಾದಿತ ವಾಹನದ ವಿರುದ್ದ ಮಾತ್ರ ದೂರನ್ನು ಏಕೆ ನೀಡಿದ್ದೀರಿ ಎಂದರೆ ಸಾಕ್ಷಿಯು ಸದರಿ ವಾಹನ ನನಗೆ ಡಿಕ್ಕಿಪಡಿಸಿದ ಕಾರಣ ಅವರ ವಿರುದ್ದ ದೂರು ನೀಡಿರುತ್ತೇನೆ ಎಂದು ನುಡಿಯುತ್ತಾರೆ. ಅಪಘಾತದಲ್ಲಿ ನನ್ನ ವಾಹನ ಸಂಪೂರ್ಣವಾಗಿ ಜಖಂ ಗೊಂಡಿತ್ತು. ನಿಪಿ 3 ರಲ್ಲಿ ವಾಹನದ

ಯಾವುದೇ ಭಾಗಗಳು ಬಿದ್ದ ಬಗ್ಗೆ ನಮೂದು ಇಲ್ಲ ಎಂದರೆ ಸರಿಯಲ್ಲ. ಸಾಕ್ಷಿಯು ಮಹಜರ್ ಅನ್ನು ನಾನು ದೂರು ನೀಡಿದ ನಂತರ ಮಾಡಲಾಗಿದ್ದು, ಆದ ಕಾರಣ ಯಾವುದೇ ಕುರುಹುಗಳು ಕಂಡುಬಂದಿಲ್ಲ ಎಂದು ನುಡಿಯುತ್ತಾರೆ. ನಿಪಿ 14ರ ರೀತ್ಯ ನನ್ನ ವಾಹನದ ಪೆಟ್ರೋಲ್ ಟ್ಯಾಂಕ್ ಮಾತ್ರ ಜಖಂ ಆಗಿದೆ ಎಂದರೆ ಸರಿಯಲ್ಲ.

ನನ್ನ ವಾಹನವನ್ನು 2023ರಲ್ಲಿ ಖರೀದಿಸಿರುತ್ತೇನೆ. ನನ್ನ ವಾಹನಕ್ಕೆ ವಿಮೆ ಇದ್ದು, ಕಂಪನಿಯ ಹೆಸರು ನೆನಪಿಲ್ಲ. ಆ ಬಗ್ಗೆ ದಾಖಲಾತಿಯನ್ನು ಹಾಜರುಪಡಿಸಲು ತೊಂದರೆ ಇಲ್ಲ. ನನ್ನ ವಾಹನದ ವಿಮಾ ಕಂಪನಿಯಿಂದ ಯಾವುದೇ ಪರಿಹಾರ ಪಡೆದಿಲ್ಲ. ನಾನು ವಾಹನದ ಮೌಲ್ಯವನ್ನು ಘೋಷಣೆ ಮಾಡಿದ್ದು, ಎಷ್ಟು ಎಂದು ನೆನಪಿಲ್ಲ. ನಿಪಿ 9 ಕ್ಕೆ ಸಂಬಂಧಪಟ್ಟವರನ್ನು ವಿಚಾರಣೆಗೆ ಒಳಪಡಿಸಲು ತೊಂದರೆ ಇಲ್ಲ. ನಿಪಿ 9 ಕ್ಕೂ, ನಿಪಿ 4 ಕ್ಕೂ ಯಾವುದೇ ಸಂಬಂಧ ಇಲ್ಲ ಎಂದರೆ ಸರಿಯಲ್ಲ. ಯಾವ ಉದ್ದೇಶಕ್ಕಾಗಿ ವೇತನ ಪಟ್ಟಿ ಹಾಜರಪಡಿಸಿರುತ್ತೇನೆ ಎಂದು ಹೇಳಲು ತಿಳಿಯುವುದಿಲ್ಲ. ನನ್ನ ವಾಹನಕ್ಕೆ ಸಣ್ಣಪುಟ್ಟ ಜಖಂ ಗಳು ಉಂಟಾಗಿದ್ದು, ಅದಕ್ಕೆ ಸಂಬಂಧಪಟ್ಟಂತೆ ನನ್ನ ವಾಹನಕ್ಕೆ ಸಂಬಂಧಿಸಿದ ವಿಮಾ ಕಂಪನಿಯಿಂದ ಪರಿಹಾರ ಪಡೆದಿದ್ದೇನೆ ಎಂದರೆ ಸರಿಯಲ್ಲ. ನಿಪಿ 9 ಕ್ಕೆ ಸೀಲು ಮತ್ತು ಸಹಿ ಇರುವುದಿಲ್ಲ ಎಂದರೆ ಸರಿಯಲ್ಲ. ನಿಪಿ 9 ನೆರಳಚ್ಚು ಪ್ರತಿಯಾಗಿದ್ದು, ಅದು ಮೂಲ ಪ್ರತಿ ಅಲ್ಲ ಎಂದರೆ ಸರಿಯಲ್ಲ. ನಿಪಿ 9 ರ ಮೂಲ ಪ್ರತಿಯನ್ನು ವಿಮಾ ಕಂಪನಿಗೆ ನೀಡಿ ಪರಿಹಾರ ಪಡೆದಿರುತ್ತೇನೆ ಎಂದರೆ ಸರಿಯಲ್ಲ. ನನ್ನ ವಾಹನದ ಖರ್ಚಿಗೆ ಸಂಬಂಧಪಟ್ಟಂತೆ ನಾನು ಹೇಳಿರುವಷ್ಟು ಹಣವನ್ನು ಖರ್ಚು ಮಾಡಿಲ್ಲ ಮತ್ತು ನನಗೆ ಯಾವುದೇ ಮಾನಸಿಕ ಖಿನ್ನತೆ ಉಂಟಾಗಿಲ್ಲ ಎಂದರೆ ಸರಿಯಲ್ಲ. ವಾಹನದ ರಿಪೇರಿಗೆ ಸಂಬಂಧಿಸಿದ ಹಣವನ್ನು ನಾನು ಆನ್

ಲೈನ್ ಮೂಲಕ ವರ್ಗಾಯಿಸಿರುತ್ತೇನೆ. ಆ ಬಗ್ಗೆ ದಾಖಲಾತಿಯನ್ನು ಹಾಜರುಪಡಿಸಲು ತೊಂದರೆ ಇಲ್ಲ. ಆಪಾದಿತ ವಾಹನದ ವಿರುದ್ದ ಸುಳ್ಳು ದೂರು ನೀಡಿದ್ದೇನೆ ಎಂದರೆ ಸರಿಯಲ್ಲ. ಪರಿಹಾರ ಪಡೆಯುವ ಉದ್ದೇಶದಿಂದ ಸೃಷ್ಟಿತ ದಾಖಲಾತಿಗಳನ್ನು ಹಾಜರುಪಡಿಸಿ, ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲ್ಪಟ್ಟಿದೆ).**

**(ಓ.ಹೇ.ಕೇ.ಸ.ಇ.)**

**1ನೇ ಎಸ್‌ಸಿಜೆ ಮತ್ತು ಎಸಿಜೆಎಮ್**

**ಬೆಂಗಳೂರು**